ಇವು ಮೊದಲು ಸಣ್ಣ ತಾಲ್ಲೂಕ್ ಕೇಂದ್ರಗಳಾಗಿದ್ದ ಕಾರಣ ರೆವಿನ್ಯೂ ಕಲೆಕ್ಷನ್ ಸರಿಯಾಗಿ ಆಗುತ್ತಿರಲಿಲ್ಲ ಅವು ಮುನಿಸಿಪಾಲಿಟಿಗಳಾದ ಮೇಲೆ ಸರ್ಕಾರದಿಂದ ಯಾವ ತರಹದ ಗ್ರಾಂಟ್ ಕೂಡ ಸಿಗುತ್ತಿಲ್ಲ .ಅವು ಟೌನ್ ಪಂಚಾಯಿತಿಗಳಾಗಿದ್ದಾಗ ಲ್ಯಾಂಡ್ ರೆವಿನ್ಯೂ ಬಾಬತ್ತು ಸ್ವಲ್ಪ ಭಾಗ ಸಿಗುತ್ತಿತ್ತು. ಆ ಹಣ ದಿಂದ ಪಗಾರ ಕೊಟ್ಟುಕೊಂಡು, ಡ್ರೈನೇಜ್ ಹಾಗೂ ಇನ್ನಿತರ ಕೆಲಸಗಳನ್ನು ಮಾಡಿಸುತ್ತಿದ್ದರು ಆದರೆ ಈಗ ಅವರಿಗೆ ಪಗಾರ ಕೊಡಲೂ ಸಹ ದುಡ್ಡು ಇಲ್ಲದಂತೆ ಆಗಿದೆ. ಸರ್ಕಾರದಿಂದ ಗ್ರಾಂಟ್ ಸಹ ಸಿಗು ತ್ತಿಲ್ಲ; ಅವುಗಳಿಗೆ ಆದಾಯ ಕೂಡ ಇಲ್ಲ; ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.— ೧೯೭೬-೭೭ ಹಾಗೂ ೧೯೭೭-೭೮ರಲ್ಲಿ ಯಾವ ಟೌನ್ ಪಂಚಾಯಿತಿಗಳೂ ಟೌನ್ ಪುರಸಭೆಗಳಾಗಿ ಪರಿವರ್ತನೆಯಾಗಿಲ್ಲ. ಆಗಿದ್ದರೆ ಇದಕ್ಕೂ ಹಿಂದೆ ಆಗಿರಬೇಕು. ನಾವು ಪಗಾರ ಕೊಡಲು ಗ್ರಾಂಟ್ ಕೊಡುವುದಿಲ್ಲ. ಏನಿದ್ದರೂ ಸರ್ಕಾರದಿಂದ ಅಭಿವೃದ್ಧಿ ಕೆಲಸಗಳಿಗೆ ಸಹಾಯ ಮಾಡುತ್ತೇವೆ. ಪಗಾರ ಕೊಡಲು ಅಲ್ಲಿಯ ಪುರಸಭೆಯವರು ಬಾಕಿ ನಿಂತಿರುವ ಹಣವನ್ನು ವಸೂಲಿ ಮಾಡಬೇಕು. ಅಲ್ಲಿ ಏನಾದರು ಸ್ಯಾನಿಟೇಷನ್ ಮುಂತಾದ ಕೆಲಸಗಳು ಆಗಬೇಕಾಗಿದ್ದರೆ, ಅದಕ್ಕೆ ಸರ್ಕಾರದಿಂದ ಹಣದ ಸಹಾಯ ಮಾಡುತ್ತೇವೆ.

ಶ್ರೀ ಎಂ. ವೈ. ಪಾಟೀಲ್.— ಅವು ಸಣ್ಣ ಹಳ್ಳಿಗಳು. ಆದಕಾರಣ ವರಮಾನ ಜಾಸ್ತಿ ಇಲ್ಲ. ವರಮಾನ ಬರಲು ಅಲ್ಲಿ ಏನಿಮಾ ಟಾಕೀಸ್‌ಗಳು ಇಲ್ಲ. ಇನ್ನು ಯಾವ ತರಹದಿಂದ ಟ್ಯಾಕ್ಸ್ ವಸೂಲಿ ಮಾಡಬೇಕು? ಇದರ ಬಗ್ಗೆ ತಾವೇ ಮಾಹಿತಿ ಕೊಡಬೇಕು?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಕಳೆದವರ್ಷ ನಾವು ಸುಮಾರು ೧೧೦ ಮುನಿಸಿಪಾಲಿಟಿಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಲು ಧನ ಸಹಾಯ ಮಾಡಿದ್ದೇವೆ. ಈ ವರ್ಷ ಸಹ ಇಂತಹ ಮುನಿಸಿ ಪಾಲಿಟಿಗಳಿಗೆ ಸಹಾಯ ಮಾಡಲು ವ್ಯವಸ್ಥೆ ಮಾಡುತ್ತೇವೆ.

SRI G. B. SHANKARA RAO.— Government have recently taken a decision to convert Town Panchayats into Town Municipal Councils. Certain Municipal Councils have no resources and are not able to maintain themselves. Will the Government help them to maintain themselves?

SRI H. C. SRIKANTAIAH. — We are going to extend all possible help to these bodies. This time also, we have made provision in the budget to give grants.

Industrial Training Institutes in the State

1004 SRI M. GANGANNA (Kustagi).— Will the Minister for Labour and Excise be pleased to state :—

(a) the number of industrial training centres in the State;

(b) whether it is not a fact that the Director after inspecting the spot has given approval for starting industrial training centre in Chavani, Lingasugur taluk Raichur district ;

(c) whether it is not a fact that representations have also been received by the Government for opening a technical training centre at Kustagi town in Raichur district; if so, the action taken by the Government in this regard so far;

(d) whether there is a proposal before the Government for opening new technical training centres during current year; if so, the places where they would be opened?

SRI R. S. PATIL (Minister for Labour and Excise).—

(a) 4 Industrial training Institutions.
4 Industrial training centres.

(b) Spot inspection has been conducted. Establishment of either industrial training Institute or centres is not found to be necessary.

(c) Yes. There is no proposal at present for starting any new training centre in any of the taluks of this district.

(d) No.

ಶ್ರೀ ಎಂ. ಗಂಗಣ್ಣ.— ಸ್ವಾಮಿ, ಮಾನ್ಯ ಮಂತ್ರಿಗಳು ಈ ರಾಜ್ಯದಲ್ಲಿ ೧೪ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು ೪ ಕೈಗಾರಿಕಾ ತರಬೇತಿ ಕೇಂದ್ರಗಳು ಇವೆ ಎಂದು ಹೇಳಿದ್ದಾರೆ. ಅಂದರೆ ಜಿಲೆಗೆ ಒಂದರಂತೆ ಸಹ ಇವು ಇಲ್ಲವೆಂದು ಅರ್ಥವಾಗುತ್ತದೆ. ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಕೈಗಾರಿಕಾ ತರಬೇತಿ ಸಂಸ್ಥೆ ಅಥವಾ ಕೇಂದ್ರ ಸ್ಥಾಪಿಸುವ ಅವಶ್ಯಕತೆ ಕಂಡು ಬಂದಿಲ್ಲವೆಂದು ಹೇಳಿದ್ದಾರೆ. ತಾವು ಕಾರ್ಮಿಕ ಇಲಾಖೆಯ ಮಂತ್ರಿಗಳಾದ ಮೇಲೆ ನಮ್ಮ ಭಾಗದಲ್ಲಿ ಇಂತಹ ಒಂದು ಕೇಂದ್ರ ಸ್ಥಾಪಿಸಲಾಗುವುದೆಂದು ಹೇಳಿದ್ದಿರಿ; ಆದರೆ ಇಲ್ಲಿಯವರೆಗೂ ಆ ಕೆಲಸ ಮಾಡದಿರುವುದಕ್ಕೆ ಕಾರಣವೇನು?

† ಶ್ರೀ ಆರ್. ಎಸ್. ಪಾಟೀಲ್.— ಈ ಕೇಂದ್ರಗಳನ್ನು ಅವಶ್ಯಕತೆ ಕಂಡು ಬಂದರೆ ಖಂಡಿತ ವಾಗಿಯೂ ತೆರಯಲಾಗುವುದು. ಈಗ ರಾಯಚೂರಿನಲ್ಲಿ ಇಂತಹ ಒಂದು ಕೇಂದ್ರವಿದೆ. ಅಲ್ಲಿ ೨೫೦ ಅಭ್ಯರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸಲು ಅವಕಾಶವಿದ್ದರೂ ಸಹ ಅಭ್ಯರ್ಥಿಗಳು ಸಿಗುತ್ತಿಲ್ಲ. ಈಗ ಅಲ್ಲಿ ೧೪೦ ಅಭ್ಯರ್ಥಿಗಳು ಮಾತ್ರ ಇದ್ದಾರೆ. ಆದಕಾರಣ ಕುಷ್ಟಗಿ ಮತ್ತು ಲಿಂಗಸಗೂರಿನಲ್ಲಿ ಇಂತಹ ಕೇಂದ್ರ ಗಳನ್ನು ತೆರೆಯುವ ಅವಶ್ಯಕತೆ ಕಂಡುಬಂದಿಲ್ಲ

೧೧-೩೦ ಎ. ಎಂ.

ಶ್ರೀ ಎಂ. ಗಂಗಣ್ಣ.— ನಮ್ಮಲ್ಲಿ ರಾಯಚೂರು ವಕ್ಕಲುತನದಲ್ಲಿ ಬಹಳ ಮುಂದುವರೆದಿದೆ. ನಮ್ಮಲ್ಲಿ ಟ್ರ್ಯಾಕ್ಟರ್ ಹಾಗೂ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕಲ್ಸ್‌ಗಳು ಸಿಕ್ಕುವು ದಿಲ್ಲ. ಆದ್ದರಿಂದ ನಮ್ಮಲ್ಲೇ ಅಂದರೆ ಲಿಂಗಸಗೂರು ತಾಲ್ಲೂಕಿನ ಭಾವಣಿಯಲ್ಲಿ ಒಂದು ಕೈಗಾರಿಕಾ ತರ ಬೇತಿ ಕೇಂದ್ರವನ್ನು ಏತಕ್ಕೆ ತೆಗೆಯಬಾರದು? ಈಗ ನಮ್ಮವರು ತರಬೇತಿಗಾಗಿ ಕೆ.ಜಿ.ಎಫ್.ಗೆ ಒರಬೇಕು. ಈ ದೃಷ್ಟಿಯಿಂದ ಈಗಾಗಲೇ ನಾನು ಹೇಳಿದ ಸ್ಥಳದಲ್ಲಿ ಏತಕ್ಕೆ ಒಂದು ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸಬಾರದು.

ಶ್ರೀ ಆರ್. ಎಸ್. ಪಾಟೀಲ್.— ಬರೀ ಟ್ರಾಕ್ಟರ್ ಹಾಗೂ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವ ಮೆಕ್ಯಾನಿಕ್‌ಗಳನ್ನು ತರಬೇತಿ ಮಾಡುವ ಸಲುವಾಗಿ ಒಂದು ಕೇಂದ್ರವನ್ನು ತೆರೆಯಬೇಕೆನ್ನುವು ದನ್ನು ನಾನು ಒಪ್ಪುವುದಿಲ್ಲ. ಬರೀ ಇಬ್ಬರು ಅಥವಾ ಮೂರು ಜನ ಮೆಕ್ಯಾನಿಕ್‌ಗಳು ಈ ಕೆಲಸಕ್ಕೆ ಬೇಕಾಗಬಹುದು. ರಾಯಚೂರಿನಲ್ಲಿ ಒಂದು ಕೇಂದ್ರ ಇರುವುದರಿಂದ ಅಲ್ಲಿಯೇ ಟ್ರಾಕ್ಟರ್ ಹಾಗೂ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವ ಒಂದು ತರಬೇತಿ ಕೋರ್ಸ್‌ನ್ನು ಪ್ರಾರಂಭ ಮಾಡಿದರೆ ಅಲ್ಲಿ ವಿದ್ಯಾರ್ಥಿಗಳು ತರಬೇತಿ ಪಡೆಯಲು ಅವಕಾಶವಾಗುತ್ತದೆ. ಆದ ಕಾರಣ ಬೇರೆ ಒಂದು ಕೇಂದ್ರವನ್ನು ತೆರೆಯಬೇಕೆನ್ನುವುದು ಆಷ್ಟೊಂದು ಒಳ್ಳೆಯದಲ್ಲ.

ಶ್ರೀ ಎಂ ಗಂಗಣ್ಣ.— ಬಳ್ಳಾರಿ ಮತ್ತು ರಾಯಚೂರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್‌ನಲ್ಲಿ ಆಟೋಮೊಬೈಲ್ ಪರೀಕ್ಷೆಯನ್ನು ಪಾಸುಮಾಡಿ ರಿಜಿಸ್ಟರ್ ಮಾಡಿರತಕ್ಕವರು ಒಬ್ಬರೂ ಇಲ್ಲ ಎಂದು ಹೇಳಿದ್ದಾರೆ. ಇದು ಸರಿಯೆ?

ಶ್ರೀ ಆರ್. ಎಸ್. ಪಾಟೀಲ್.— ಒಬ್ಬರೂ ಇಲ್ಲ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ನಾನು ನೋಡಿಸುತ್ತೇನೆ.